THE MYSORE LEGISLATIVE ASSEMBLY.

TENTH DAY.

Saturday, 21st March 1953.

The House met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (Sri H. Siddaiya, B.A., LL.B.) in the Chair.

QUESTIONS AND ANSWERS.

Tile Factory near Kandavarakere.

Q.—174. **Sri A. MUNIAPPA** (Sidlaghatta Chikballapur—Scheduled Castes).—

Will the Government be pleased to state :—

(*a*) whether they intend to start a Tile Factory near Kandavarakere of Chikballapur Taluk.

(*b*) whether they are aware that all the materials required for a Tile Factory are available there ?

A.—**Sri H. SIDDAVEERAPPA** (Minister for Home and Industries).—

(*a*) Not for the present.

(*b*) The clay at Kandavarakere has been tested and found not quite well suited for manufacturing good and durable tiles ; but if mixed with clay found at Hosakere nearby, it might prove suitable for the purpose.

ಶ್ರೀ ಎ. ಮುನಿಯಪ್ಪ.—(ಎ) ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ಸಧ್ಯದಲ್ಲಿಲ್ಲವೆಂದು ಉತ್ತರಕೊಡಲಾಗಿದೆ. ಕಾರಣವೇನು ಸ್ವಾಮಿ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಷಯವನ್ನು ವಿಚಾರಮಾಡಲಾಗಿ, ಹಾಗೆ ಒಂದು ಹೆಂಚಿನ ಕಾರ್ಖಾನೆಯನ್ನು ಅಲ್ಲಿ ಸ್ಥಾಪಿಸಬೇಕಾಗಿದ್ದರೆ ಒಂದು ಲಕ್ಷ 38 ಸಾವಿರದ 500 ರೂಪಾಯಿಗಳು ಬೇಕಾಗಬಹುದೆಂದು ತಿಳಿದುಬಂದಿದೆ. ಈಗಿರತಕ್ಕ ಹಣಕಾಸಿನ ಅಭಾವಸ್ಥಿತಿಯಲ್ಲಿ ಸದ್ಯಕ್ಕೆ ಅಂಥ ಯೋಜನೆಗಳನ್ನು ಮುಂದಕ್ಕೆ ಹಾಕಲಾಗಿದೆ. ಆದಕ್ಕೋಸ್ಕರ ಯಾರಾದರೂ ಜಾಯಿಂಟ್‌ಸ್ಟಾಕ್ ಕಂಪೆನಿಯವರೋ ಅಥವಾ ಸಹಕಾರ ಸಂಘಗಳವರೋ ಮುಂದೆ ಬಂದರೆ ಸರ್ಕಾರದವರು ಸಹಾನುಭೂತಿ ತೋರಿಸಲು ಸಿದ್ಧವಾಗಿರುತ್ತಾರೆ.

ಶ್ರೀ ಎ. ಮುನಿಯಪ್ಪ.—ವಿ. ಜಿ. ಡಿ. ಸಮಿತಿಯವರು ತಮಗೆ ಈ ಸಂಬಂಧವಾಗಿ ಏನಾದರೂ ಶಿಫಾರ್ಸುಗಳನ್ನು ಕಳುಹಿಸಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎ. ಮುನಿಯಪ್ಪ.—ತಾವು ಇದರ ಬಗ್ಗೆ ಪರೀಕ್ಷೆ ನಡೆಸಿದ್ದು ಯಾವಾಗ ?

ಶ್ರೀ ಎಚ್. ಸಿದ್ದವೀರಪ್ಪ.—ತಾ॥ 25-2-1953 ರಲ್ಲಿ ಪರೀಕ್ಷೆ ಆಗಿ ವರದಿ ಬಂದಿದೆ.

ಶ್ರೀ ಎ. ಮುನಿಯಪ್ಪ.—ಪರೀಕ್ಷೆಮಾಡಿಸಿದ್ದರ ಉದ್ದೇಶವೇನು?

ಶ್ರೀ ಎಚ್. ಸಿದ್ದವೀರಪ್ಪ.—ಆ ಮಣ್ಣು ಹೆಂಚುಗಳ ತಯಾರಿಕೆಗೆ ಸರಿಯಾಗಿದೆಯೇ ಇಲ್ಲವೇ ಎಂಬ ಅಂಶವನ್ನು ತಿಳಿದುಕೊಳ್ಳುವುದಕ್ಕೂ ಮತ್ತು ಆ ಮಣ್ಣಿಗೆ ಇತರ ಯಾವ ಮಣ್ಣನ್ನು ಬೆರಸಿದರೆ ಅನುಕೂಲವಾಗುತ್ತದೆ ಎಂಬ ಅಂಶಗಳನ್ನು ತಿಳಿಯಲು ಪರೀಕ್ಷೆ ನಡೆಸಲಾಯಿತು.

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರಕ್ಕೆ ಸಮೀಪದಲ್ಲೇ ಕಂದಾವರ ಕೆರೆ ಇದ್ದು, ಈ ಕಂದಾವರ ಕೆರೆಗೆ 4 ಫರ್ಲಾಂಗಿನಲ್ಲೇ ಹೊಸಕೆರೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿದೆ. ಅದನ್ನು ಉತ್ತರದಲ್ಲೇ ತಿಳಿಸಿದೆ.

ಶ್ರೀ ಎ. ಮುನಿಯಪ್ಪ.—ಈ ಕೈಗಾರಿಕೆಯನ್ನು ಅಲ್ಲಿ ಏರ್ಪಡಿಸಿದರೆ ಜನರ ನಿರುದ್ಯೋಗ ಸಮಸ್ಯೆ ಬೇಗ ಪರಿಹಾರವಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಅದೂ ಆಗುತ್ತದೆ, ವ್ಯಾಪಾರವೂ ಜಾಸ್ತಿಯಾಗುತ್ತದೆ. ಇನ್ನೂ ಅನೇಕ ವಿಚಾರಗಳ ಅನುಕೂಲವಿದೆ. ಅದಕ್ಕೇ ನಾವು ಆ ವಿಷಯವನ್ನು ಇನ್ನೂ ಪೂರ್ತಿಯಾಗಿ ಕೈಬಿಟ್ಟಿಲ್ಲ.

ಶ್ರೀ ಎ. ಮುನಿಯಪ್ಪ.—ಈಗಾಗಲೇ ಅಲ್ಲಿ ಒಂದು ಹೆಂಚಿನ ಕಾರ್ಖಾನೆ ಇದ್ದು ಹೆಂಚುಗಳನ್ನು ತಯಾರಿಸಿ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಮಾರಾಟಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ. ಅವರು ಎಲ್ಲೋ ಕಡಮೆ ಪ್ರಮಾಣದಲ್ಲಿ ಕೆಲಸ ನಡೆಸುತ್ತಿದ್ದಾರೆ. ದಿವಸಕ್ಕೆ ನೂರು ಹೆಂಚ ಗಳನ್ನೇನೋ ಈಗ ತಯಾರು ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಶ್ರೀ ಎ. ಮುನಿಯಪ್ಪ.—ಇದನ್ನು ಅದಷ್ಟು ಜಾಗ್ರತೆ ಏರ್ಪಾಡುಮಾಡುವುದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಎಚ್. ಸಿದ್ದವೀರಪ್ಪ.—ನಾನಾಗಲೇ ತಿಳಿಸಿರುವಂತೆ ಖಾಸಗೀ ಸಂಸ್ಥೆಗಳವರು ಮುಂದೆ ಬಂದರೆ ನಾವು ಕೈಲಾದಮಟ್ಟಿಗೂ ಸಹಾಯನೀಡಬಹುದು.